**ದಿನಾಂಕಃ04.10.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಅನುಮತಿಯ ಮೇರೆಗೆ ಮುಂದುವರೆದ ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ–**

20. ಈಗ ನಾನು ಪಿಎಫ್ ನಂ.27/2017 ರಲ್ಲಿ ವಿವರಿಸಿದ ಕ್ರ.ಸಂ.1 ರಲ್ಲಿ ಪಿನಾಪ್ತಲೀನ್ ಪೌಡರ್ ಇರುವ ಒಂದು ಕವರ್, ಕ್ರ.ಸಂ.2 ರಲ್ಲಿ ಮಾದರಿಗಾಗಿ ಸಂಗ್ರಹಿಸಿದ ಸೋಡಿಯಂ ಕಾರ್ಬೋನೇಟ್ ಧ್ರಾವಣ ಇರುವ ಗಾಜಿನ ಬಾಟಲಿ, ಕ್ರ.ಸಂ.4(ಎ)ರಲ್ಲಿ ವಿವರಿಸಿರುವ ಸಿಡಿಯಿರುವ ಮೇಲರ್, ಕ್ರ.ಸಂ.5 ರಲ್ಲಿರುವ ಮೆಮೊರಿ ಚಿಪ್ ಇವುಗಳನ್ನು ಹಾಜರು ಪಡಿಸಿ ಅವುಗಳನ್ನು ಕ್ರಮವಾಗಿ ಮು.ಮಾ.2 ರಿಂದ 5 ಎಂದು ಗುರುತಿಸಲಾಯಿತು.

21. ಈಗ ನಾನು ಪಿಎಫ್ ನಂ.28/2017 ರಲ್ಲಿ ವಿವರಿಸಿದ ಕ್ರ.ಸಂ.1 ರಲ್ಲಿರುವ ಗಾಜಿನ ಸೋಡಿಯಂ ಕಾರ್ಬೋನೇಟ್ ಧ್ರಾವಣ ಇರುವ ಗಾಜಿನ ಬಾಟಲಿ, ಕ್ರ.ಸಂ.2 ಮತ್ತು 3 ರಲ್ಲಿ ವಿವರಿಸಿರುವ ತೆಳು ಗುಲಾಬಿ ಬಣ್ಣದ ಧ್ರಾವಣವಿರುವ ಬಾಟಲಿಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.6 ರಿಂದ 8 ಎಂದು ಗುರುತಿಸಲಾಯಿತು.

22. ನಾನು ಆರೋಪಿಗೆ ನೀಡಿದ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಹಣದ ಗುರುತಿನ ಬಗ್ಗೆ ಯಾವುದೇ ವಿವಾದವಿಲ್ಲ ಎಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ. ಸದರಿ ಹಣವು ಟ್ರೆಷರಿ ಬಾಕ್ಸಿನಲ್ಲಿ ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು.

23. ಈಗ ನಾನು ಪಿಎಫ್ ನಂ.28/2017 ರಲ್ಲಿ ವಿವರಿಸಿದ ಕ್ರ.ಸಂ.5 ಮತ್ತು 6 ರಲ್ಲಿ ವಿವರಿಸಿರುವ ತೆಳು ಗುಲಾಬಿ ಬಣ್ಣದ ಧ್ರಾವಣವಿರುವ ಬಾಟಲಿಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.10 ಮತ್ತು 11 ಎಂದು ಗುರುತಿಸಲಾಯಿತು.

24. ಈಗ ಕವರಿನಲ್ಲಿ ಸುತ್ತಿ ಮೊಹರು ಮಾಡಿದ ಮಾಲು ಪಟ್ಟಿ ಸಂಖ್ಯೆ 28/2017 ರ ಕ್ರಮಸಂಖ್ಯೆ 7 ರ ವಸ್ತುವನ್ನು ತೆರೆಯಲಾಯಿತು. ಅದರೊಳಗಡೆ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಇದ್ದು ಅದನ್ನು ಮು.ಮಾ.12 ಎಂದು, ಕ್ರ.ಸಂ.8 ರಲ್ಲಿ ವಿವರಿಸಿದ ಸೋಡಿಯಂ ಕಾರ್ಬೋನೇಟ್ ಪೌಡರ್ ಇರುವ ಕವರ್ ಇದ್ದು, ಅದನ್ನು ಮು.ಮಾ.13 ಎಂದು ಗುರುತಿಸಲಾಯಿತು.

25. ಕ್ರ.ಸಂ.9 ರಲ್ಲಿ 14(ಎ) ಎಂದು ವಿವರಿಸಿರುವ ಸಿಡಿಯಿರುವ ಮೇಲರನ್ನು ಮು.ಮಾ.14 ಎಂದು ಗುರುತಿಸಲಾಯಿತು.

26. ಆರೋಪಿ ಪರ ವಕೀಲರು ಮು.ಮಾ.4 ಮತ್ತು 5 ಹಾಗೂ 14 ನ್ನು ಗುರುತಿಸಲು ಈ ಕೆಳಕಂಡಂತೆ ಆಕ್ಷೇಪವೆತ್ತಿರುತ್ತಾರೆ. ಸದರಿ ಮುದ್ದೆ ಮಾಲುಗಳ ಪ್ರತಿಗಳನ್ನು ತನಗೆ ನೀಡಿರುವುದಿಲ್ಲ. ಹಾಗೂ ಅವುಗಳ ಬಗ್ಗೆ ಕಲಂ.65(ಬಿ) ಸರ್ಟಿಫಿಕೇಟ್ ಇರವುದಿಲ್ಲ ಎಂದು ಹೇಳಿರುತ್ತಾರೆ. ಆ ಕಾರಣ ಅವರ ಆಕ್ಷೇಪಕ್ಕೆ ಒಳಪಟ್ಟು ಸದರಿ ಮು.ಮಾ.ಗಳನ್ನು ಗುರುತಿಸಲಾಯಿತು.

27. ಈಗ ನನಗೆ ತೋರಿಸಿದ ಮು.ಮಾ.2 ರಿಂದ 5 ನ್ನು ಆರೋಪಿಯ ಕಛೇರಿಯಲ್ಲಿ ಮೊಹರು ಮಾಡಿರುತ್ತಾರೆ. ಈಗ ನನಗೆ ತೋರಿಸಿದ ಮು.ಮಾ.6 ರಿಂದ 8 ಮತ್ತು 10 ರಿಂದ 14 ನ್ನು ಆರೋಪಿಯ ಕಛೇರಿಯಲ್ಲಿ ಮೊಹರು ಮಾಡಿರುತ್ತಾರೆ. ಮು.ಮಾ.2 ರಿಂದ 5 ನ್ನು Entrustment Mahazar ಮಾಡುವ ಕಾಲದಲ್ಲಿ ಎಸಿಬಿ ಕಛೇರಿಯಲ್ಲಿ ಮಾಡಲಾಗಿತ್ತು ಎಂದರೆ ಸರಿ.

**ಪಾಟೀಸವಾಲುಃ ಮಾನ್ಯ ಆರೋಪಿ ಪರ ವಕೀಲರಿಂದಃ-**

28. ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹುಟ್ಟಿ ಬೆಳೆದುದ್ದೆಲ್ಲ ಟಿ.ನರಸೀಪರದಲ್ಲಿ. ನನಗೆ ಅಲ್ಲಿ ಸ್ವಂತ ಮನೆಯಿಲ್ಲ, ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನನ್ನ ವೈಯುಕ್ತಿಕ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ನಾನು ಅನಾಥಶ್ರಮವನ್ನು ನಡೆಸುತ್ತಿದ್ದೇನೆ. ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆಯನ್ನು ದಾನಿಗಳು ನೀಡಿದ ದೇಣಿಗೆಯ ಮೂಲಕ ಮಾಡುತ್ತೇನೆ. ನಾನು ಕಂದಾಯ ಕಛೇರಿಗಳಿಗೆ ಹೋಗಿ ಅಲ್ಲಿ ಕೆಲಸಗಳನ್ನು ಮಾಡಿಕೊಡುವ ಸಮಾಜಸೇವೆಯನ್ನು ಸಹ ಮಾಡುತ್ತೇನೆ.

29. ನನಗೆ ಆರೋಪಿಯು ಟಿ.ನರಸೀಪುರ ಕಛೇರಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ 2004-10 ರವರೆಗೆ ಕೆಲಸ ಮಾಡುತ್ತಿದ್ದಾಗಿನಿಂದ ಪರಿಚಯವಿರುತ್ತದೆ. ಆರೋಪಿಯೊಡನೆ ನನಗೆ ಒಳ್ಳೆಯ ಬಾಂಧವ್ಯವಿತ್ತು ಎಂದರೆ ಸರಿ.

30. ವ್ಯವಸಾಯ ಭೂವಿಯ ಭೂಪರಿವರ್ತನೆಯ ಮಾಡುವ ಅಧಿಕಾರ ಒಂದರಿಂದ-ಒಂದೂವರೆ ಎಕ್ಕರೆಯ ವಿಸ್ತೀರ್ಣದ ಜಮೀನಿಗೆ ಜಿಲ್ಲಾಧಿಕಾರಿಯವರಿಗೆ ಹಾಗೂ ಅದಕ್ಕಿಂತ ಹೆಚ್ಚಿನ ವಿಸ್ತೀರ್ಣದ ಜಮೀನಿನ ಭೂ ಪರಿವರ್ತನೆಯನ್ನು ಸರ್ಕಾರದ ಮೂಲಕ ಮಾಡಬೇಕಾಗುತ್ತದೆ ಎಂದರೆ ಸರಿ. ಗ್ರಾಮ ಲೆಕ್ಕಾಧಿಕಾರಿಗೆ ಭೂ ಪರಿವರ್ತನೆ ಮಾಡುವ ಅಧಿಕಾರವಿಲ್ಲವೆಂದು ನನಗೆ ತಿಳಿದಿತ್ತು ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಭೂ ಪರಿವರ್ತನೆಗೆ ಕೊಟ್ಟಿದ್ದೇನೆ ಎಂದು ಹೇಳಲಾದ ಅರ್ಜಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ.

31. ಈಗ ನನಗೆ ತೋರಿಸಿದ ನಿಪಿ-14, ಪುಟಸಂಖ್ಯೆ 167 ರಲ್ಲಿರುವ ಅರ್ಜಿ ಸಿಸ್ಟರ್ ತೆರೆಸಾ ಕೊಟ್ಟಿರುವ ಅರ್ಜಿ ಎಂದರೆ ಸರಿ. ನಿಪಿ-14 ರ ಪುಟಸಂಖ್ಯೆ 166 ಪ್ರಕಾರ ಸದರಿ ಅರ್ಜಿಯನ್ನು ಸಂಬಂಧಪಟ್ಟ ದಾಖಲಾತಿಗಳೊಡನೆ ಜಿಲ್ಲಾಧಿಕಾರಿಯು ತಾಸೀಲ್ದಾರ್, ಮೈಸೂರು ತಾಲ್ಲೂಕು, ರವರಿಗೆ ಕಳುಹಿಸಿಕೊಟ್ಟಿದ್ದಾರೆ ಎಂದರೆ ಸರಿ. ನಿಪಿ-14 ರ, ಪುಟಸಂಖ್ಯೆ 165 ರ ಪ್ರಕಾರ ತಾಸೀಲ್ದಾರ್, ಮೈಸೂರು ತಾಲ್ಲೂಕು, ರವರು ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ಮೈಸೂರು, ರವರಿಗೆ ದಾಖಲಾತಿಗಳನ್ನು ಕಳುಹಿಸಿದ್ದನ್ನು ಕಂಡು ಬರುತ್ತದೆ ಮತ್ತು ಅದರಂತೆ ದಿಃ26.06.2017 ರಂದು ರಾಜಸ್ವ ನಿರೀಕ್ಷಕರು ಸದರಿ ದಾಖಲಾತಿಗಳನ್ನು ಸ್ವಿಕರಿಸಿದ ಬಗ್ಗೆ ತಮ್ಮ ಕಿರುಸಹಿಯನ್ನು ಹಾಕಿದ್ದಾರೆ ಎಂದರೆ ಸರಿ. ನಿಪಿ-14 ರ ಪುಟಸಂಖ್ಯೆ 160-161 ರ ಪ್ರಕಾರ ರಾಜಸ್ವ ನಿರೀಕ್ಷಕರ ವರದಿಯಿರತ್ತದೆ ಎಂದರೆ ಸರಿ. ನಿಪಿ-14 ರ ಪುಟಸಂಖ್ಯೆ 162 ರ ಪ್ರಕಾರ ರಾಜಸ್ವ ನಿರೀಕ್ಷಕರ ದೃಢೀಕರಣ ಪತ್ರವಿರತ್ತದೆ ಎಂದರೆ ಸರಿ. ನಿಪಿ-14 ರ ಪುಟಸಂಖ್ಯೆ 163 ರ ಪ್ರಕಾರ ರಾಜಸ್ವ ನಿರೀಕ್ಷಕರು ಗ್ರಾಮಸ್ಥರ ಸಮಕ್ಷಮ ಒಂದು ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿ. ಈ ಬಗ್ಗೆ ಸ್ಥಳ ಪರಿಶೀಲನೆ ಸಮಯದಲ್ಲಿ ಸಿಸ್ಟರ್ ತೆರೆಸಾರವರು ನಮೊಂದಿಗೆ ಸ್ಥಳಕ್ಕೆ ಬಂದಿರಲಿಲ್ಲ. ನಿಪಿ-14 ರ ಪುಟಸಂಖ್ಯೆ 164 ರಲ್ಲಿ ರಾಜಸ್ವ ನಿರೀಕ್ಷಕರ ಹಾಜರಾತಿ ಕಂಡುಬರುತ್ತದೆ ಎಂದರೆ ಸರಿ.

32. ಈ ಪ್ರಕರಣದ ಕಡತದಲ್ಲಿ ಕಂದಾಯ ಕಛೇರಿಯ ದಾಖಲಾತಿಗಳನ್ನು ಇಲ್ಲಿಯೂ ಆರೋಪಿಯ ಸಹಿ ಕಂಡುಬರುವುದಿಲ್ಲ ಎಂದರೆ ಸರಿ. ಈ ಭೂಪರಿವರ್ತನೆ ಕೆಲಸಕ್ಕೆ ಸಂಬಂಧಪಟ್ಟಂತೆ ನಾನು ಎಸಿಬಿಗೆ ದೂರು ಕೊಡುವ ಮೊದಲು ಸುಮಾರು 1 ವರ್ಷಗಳ ಕಾಲ ಓಡಾಡಿರುತ್ತೇನೆ. ಹೀಗೆ ವಿಳಂಬ ಏಕೆ

ಆಗುತ್ತದೆ ಎಂದು ನಾನು ಜಿಲ್ಲಾಧಿಕಾರಿಯವರ ಕಛೇರಿಗೆ ಹೋಗಿ ವಿಚಾರಿಸಿರುತ್ತೇನೆ. ಆಗ ಅವರು ಈ ಬಗ್ಗೆ ವರದಿಗಾಗಿ ಆರೋಪಿಗೆ ಕಳುಹಿಸಿರುತ್ತಾರೆ ಎಂದು ಹೇಳಿರುತ್ತಾರೆ. ಅದನ್ನು ಜಿಲ್ಲಾಧಿಕಾರಿ ಕಛೇರಿಯಿಂದ ಕಳುಹಿಸಿರುತ್ತಾರೆ ಎಂದು ಹೇಳಿರುತ್ತಾರೆ. ಈಗ ನನಗೆ ತೋರಿಸಿದ ದಾಖಲಾತಿಗಳ ಪ್ರಕಾರ ಹಾಗೆ ಅದನ್ನು ವರದಿಗಾಗಿ ಆರೋಪಿಗೆ ಕಳುಹಿಸಿದ್ದ ಬಗ್ಗೆ ಕಂಡುಬರುವುದಿಲ್ಲ ಎಂದರೆ ಸರಿ.

33. ರಾಜಸ್ವ ನಿರೀಕ್ಷಕರ ಕಛೇರಿಯಲ್ಲಿ ವಿಳಂಬವಾಗುತ್ತದೆ ಎನ್ನುವ ಕಾರಣದಿಂದ ನಾನು ಎಸಿಬಿ ಕಛೇರಿಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಾಜಸ್ವ ನಿರೀಕ್ಷಕರಾಗಿ ಯಾರು ಕರ್ತವ್ಯದಲ್ಲಿದ್ದರೆಂದು ನನಗೆ ಮರೆತು ಹೋಗಿದೆ. ನಾನು ಕೊಟ್ಟ ದೂರು ಎಸಿಬಿ ಕಛೇರಿಯಲ್ಲಿ ಬೆರಳಚ್ಚು ಮಾಡಿದ್ದು ಎಂದರೆ ಸರಿಯಲ್ಲ. ಅದನ್ನು ನಾನು ಟಿ.ನರಸೀಪುರದ ಜೆರಾಕ್ಸ್ ಅಂಗಡಿಯಲ್ಲಿ ಬೆರಳಚ್ಚು ಮಾಡಿರುತ್ತೇನೆ.

ಪ್ರಶ್ನೆಃ ನನ್ನ ಬಳಿ ಯಾರು ಹಣವನ್ನು ಕೇಳಿರುವುದಿಲ್ಲ, ನಾನು ಎಸಿಬಿ ಕಛೇರಿಗೆ ದೂರು ಕೊಟ್ಟಲ್ಲಿ ನನ್ನ ಕೆಲಸ ಬೇಗ ಆಗುತ್ತದೆ ಎಂದು ದುೂರು ಕೊಟ್ಟದ್ದೇ?

ಉತ್ತರಃ ನನ್ನ ಬಳಿ ಹಣವನ್ನು ಕೇಳಿದ್ದರು, ನಾನು ಎಸಿಬಿ ಕಛೇರಿಗೆ ದೂರು ಕೊಟ್ಟಲ್ಲಿ ನನ್ನ ಕೆಲಸ ಬೇಗ ಆಗುತ್ತದೆ ಎಂದು ದುೂರು ಕೊಟ್ಟಿರುತ್ತೇನೆ.

34. ಆರೋಪಿಯು ನನ್ನ ಬಳಿ ಈ ಕೆಲಸಕ್ಕಾಗಿ ಯಾವತ್ತು ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಮುಂಗಡವಾಗಿ ರೂ.15,000/- ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆಯೇ ಟ್ರಾಪ್ ಸಮಯದಲ್ಲಿ ನಾನು ಆರೋಪಿಗೆ ರೂ.30,000/- ಕೊಟ್ಟಿರ್ರತ್ತೇನೆ ಮತ್ತು ಅದನ್ನು ಆರೋಪಿಯು ಪ್ಯಾಂಟ್ ಜೇಬಿಗೆ ಹಾಕಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರೂ.30,000/-ವನ್ನು ಆರೋಪಿಯ ಪ್ಯಾಂಟಿನ ಬಲ ಜೇಬಿಗೆ ತುರುಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಆರೋಪಿಯ ಕೈಯಿಂದ ತೆಗೆಸಿ ನಂತರ ಈ ಮುಂದಿನ ನಡವಳಿಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

35. ಟ್ರಾಪ್ ಮಹಜರನ್ನು ನಾನು ಈಗ ನೋಡುತ್ತಿದ್ದು, ಅದರ ಪ್ರಕಾರ ಆರೋಪಿಯ ಪ್ಯಾಂಟಿನ ಬಲಭಾಗದ ಜೇಬನ್ನು ತೊಳೆದಿರುತ್ತಾರೆ. ಅದನ್ನು ತೊಳೆದ ಸಿಕ್ಕಿದ ದ್ರಾವಣವನ್ನು ಪಿ.ಎಫ್.28/2017 ಕ್ರ.ಸಂ.6 ಆರ್ಟಿಕಲ್ ನಂ.11 ಎಂದು ತೋರಿಸಿರುತ್ತಾರೆ ಎಂದರೆ ಸರಿ.

36. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ನನ್ನ ಬಳಿ ರೂ.50,000/- ಲಂಚವನ್ನು ಕೊಡಲು ಒತ್ತಾಯಿಸಿದನು, ಎಂದು ದೂರಿನಲ್ಲಿ ಹಾಗೂ ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾನು ನನ್ನ ಮುಖ್ಯವಿಚಾರಣೆಯ 3 ನೇ ಕಂಡಿಕೆಯಲ್ಲಿ ಹೇಳಿದಂತೆ ಆರೋಪಿಗೆ ಮುಂಗಡವಾಗಿ ರೂ.15,000/- ನೀಡಿದ ನಂತರ ರೂ.35,000/-ಗಳನ್ನು ತೆಗೆದುಕೊಂಡು ಆರೋಪಿಯನ್ನು ಭೇಟಿ ಮಾಡಲು ಹೋಗಿರುತ್ತೇನೆ ಮತ್ತು ಆರೋಪಿಯು ನನ್ನಿಂದ ರೂ.35,000/-ಸ್ವೀಕರಿಸಿದ್ದಾನೆ ಎಂದು ನನ್ನ ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಹೇಳಿರುತ್ತೇನೆ.

37. Entrustment Mahazar ಮಾಡುವ ಕಾಲದಲ್ಲಿ ಎಸಿಬಿ ಪೊಲೀಸರ ಮುಂದೆ ರೂ.35,000/- ಹಾಜರು ಪಡಿಸಿರುತ್ತೇನೆ ಎಂದು Entrustment Mahazar ನಲ್ಲಿ ಬರೆದಿರುವುದಿಲ್ಲ. ಹಾಗೆಯೇ ನನ್ನ ಹೇಳಿಕೆಯಲ್ಲಿಯೂ ಹೇಳಿರುವುದಿಲ್ಲ. ಸಾಕ್ಷಿಯು ಅದು ರೂ.30,000/- ಎಂದು ಆಗಿದ್ದು ನಾನು ತಪ್ಪಾಗಿ ನನ್ನ ಮುಖ್ಯ ವಿಚಾರಣೆಯಲ್ಲಿ ರೂ.35,000/- ಎಂದು ಹೇಳಿರುತ್ತೇನೆ.

ಪ್ರಶ್ನೆಃ ನಿಮ್ಮ ಸಾಕ್ಷಿ ವಿಚಾರಣೆಯಾದ ದಿನವೇ ನಿಮಗೆ ನೀವು ಮುಖ್ಯವಿಚಾರಣೆಯಲ್ಲಿ ರೂ.35,000/- ಎಂದು ರೂ.30,000/-ದ ಬದಲಾಗಿ ತಪ್ಪಾಗಿ ಹೇಳಿದ್ದೇನೆ ಎಂದು ಹೇಳಲು ತೊಂದರೆಯಿತ್ತೇ?

ಉತ್ತರಃ ನನಗೆ ಆ ದಿನ ಜ್ವರ ಬರುತ್ತಿತ್ತು, ಆರೋಗ್ಯ ಸರಿಯಿರಲಿಲ್ಲ, ನನಗೆ ನ್ಯಾಯಾಲಯಕ್ಕೆ ಬರಲೇ ಬೇಕು ಎಂದು ಪೊಲೀಸರು ಹೇಳಿದ ಕಾರಣ ನಾನು ನ್ಯಾಯಾಲಯಕ್ಕೆ ಆ ದಿನ ಬಂದು ಸಾಕ್ಷ ನುಡಿದಿದ್ದೇನೆ.

38. ನನಗೆ ನ್ಯಾಯಾಲಯಕ್ಕೆ ಬಂದಾಗ ತುಂಬಾ ಭಯವಿದ್ದ ಕಾರಣ, ನಾನು ನ್ಯಾಯಾಧೀಶರಲ್ಲಿ ನನಗೆ ಆರೋಗ್ಯ ಸರಿಯಿಲ್ಲ ಕಾಲಾವಕಾಶ ನೀಡಬೇಕು ಎಂದು ಕೇಳಿರುವುದಿಲ್ಲ. ನನಗೆ ಆ ದಿನ

ಸರಾಗವಾಗಿ ಮಾತನಾಡಲು ಆಗುತ್ತಿರಲಿಲ್ಲ. ಆ ದಿನ ನನ್ನನ್ನು ನ್ಯಾಯಾಧೀಶರು ಸಹ ಪ್ರಶ್ನೆ ಮಾಡಿದ್ದರು ಎಂದರೆ ಸರಿ. ಆಗ ಸರಾಗವಾಗಿ ಉತ್ತರವನ್ನು ಕೊಟ್ಟಿದ್ದೆನು ಎಂದರೆ ಸರಿ. ದಿಃ11.03.2020 ರಂದು ನಾನು ನನ್ನ ಸಾಕ್ಷಿ ವಿಚಾರಣೆಯಲ್ಲಿ ಸತ್ಯವನ್ನು ನುಡಿದಿರುತ್ತೇನೆ. ಆ ಕಾರಣ ನನಗೆ ಭಯವಿತ್ತು ಎಂದು ನಾನು ಹೇಳುವುದು ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದಿದ್ದು ಅದೇ ದಿನ ಮೊದಲ ಬಾರಿಯಾಗಿರುತ್ತದೆ.

39. ನಾನು ಈ ಹಿಂದೆ ಚಾಮರಾಜನಗರದಲ್ಲಿ ಹೆಚ್.ಸಿ.ಸೋಮಣ್ಣ, ಎಂಬ ಇಂಜಿನೀಯರ್ ವಿರುದ್ಧ ದೂರು ಕೊಟ್ಟು ಅವರನ್ನು ಟ್ರಾಪ್ ಮಾಡಿಸಿದ್ದೆನು. ಸದರಿ ಪ್ರಕರಣದಲ್ಲಿ ನಾನು ಪ್ರಾಸಾ–2 ಆಗಿ ಸಾಕ್ಷಿ ನುಡಿದಿದ್ದೇನೆ ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ಪ್ರಕರಣದ ತೀರ್ಪು ಎಂದು, ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ಇದಾದ ನಂತರ ನನ್ನ ಸೂಚನೆಯ ಮೇರೆಗೆ 2 ದೂರುಗಳನ್ನು ದಾಖಲಿಸಿ ಅದರಲ್ಲಿ ಟ್ರಾಪ್ ಮಾಡಲಾಗಿದೆ ಎಂದರೆ ಸರಿ.

40. ನಾನು ನಡೆಸುವ ಆಶ್ರಮದಲ್ಲಿ 11 ಮಕ್ಕಳು ಇದ್ದು, ಅದನ್ನು ಸಂಬಂಧಪಟ್ಟ ಸರ್ಕಾರಿ ಇಲಾಖೆಯಡಿ ನೊಂದಣಿ ಮಾಡಿರುತ್ತೇನೆ. ನನ್ನಲ್ಲಿ ಕೇವಲ 6 ಮಕ್ಕಳು ಇದ್ದು ಅವರನ್ನು ತೋರಿಸಿ ಸರ್ಕಾರಿ ಅಧಿಕಾರಿಗಳಿಂದ ಹಣವನ್ನು ಕೀಳುವುದು ನನ್ನ ಕೆಲಸ ಎಂದರೆ ಸರಿಯಲ್ಲ. ಯಾರು ಹಣ ಕೊಡುವುದಿಲ್ಲವೋ ಅವರ ವಿರುದ್ಧ ನಾನು ಅಥವಾ ನನಗೆ ಬೇಕಾದವರ ಮೂಲಕ ದೂರನ್ನು ಕೊಟ್ಟು ಅವರನ್ನು ಟ್ರಾಪ್ ಮಾಡಿಸುವುದು ನನ್ನ ಕೆಲಸ ಎಂದರೆ ಸರಿಯಲ್ಲ. ಕೇಸ್ ದಾಖಲಾದ ನಂತರ ಅವರು ನಾನು ಹೇಳಿದಂತೆ ಕೇಳಿದರೆ ಅವರಿಗೆ ಸಹಾಯ ಮಾಡುತ್ತೇನೆ, ಇಲ್ಲವಾದಲ್ಲಿ ಅವರ ವಿರುದ್ಧ ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ.

41. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಎಸಿಬಿ ಪೊಲೀಸರು ಸ್ಥಳಕ್ಕೆ 3 ಜನ ಪಂಚಸಾಕ್ಷಿಗಳನ್ನು ಬರ ಮಾಡಿಕೊಂಡಿದ್ದರು ಎಂದು ಮಹಜರ್ ಅಥವಾ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನೋಟುಗಳ ಸಂಖ್ಯೆಗಳನ್ನು ಬೆರಳಚ್ಚು ಮಾಡಲಾಯಿತು ಎಂದು Entrustment Mahazar ನಲ್ಲಿ ಬರೆಯಲಾಗಿದೆ. ಟ್ರಾಪ್ ಮಹಜರಿನಲ್ಲಿ ನಾನು ಆರೋಪಿಗೆ ರೂ.35,000/– ಕೊಟ್ಟೆ ಎಂದು ಬರೆದಿರುವುದಿಲ್ಲ ಹಾಗೂ ನನ್ನ ಹೇಳಿಕೆಯಲ್ಲಿಯೂ ಅದನ್ನು ಹೇಳಿರುವುದಿಲ್ಲ, ಸಾಕ್ಷಿಯು ಅದು

ತಪ್ಪಾಗಿ ರೂ.30,000/- ಬದಲಾಗಿ ರೂ.35,000/- ಎಂದು ಹೇಳಿದ್ದೇನೆ ಎನ್ನುತ್ತಾರೆ. ನೀವು ಆ ದಿನ ರೂ.35,000/- ನಿಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೀರ ಎಂದರೆ ಸಾಕ್ಷಿಯು ತನಗೆ ಆ ದಿನ ಆರೋಗ್ಯ ಸರಿ ಇದ್ದ ಕಾರಣ ತಪ್ಪಾಗಿ ರೂ.35,000/- ಎಂದು ಹೇಳಿದ್ದೇನೆ. ಹಾಗೆ ನಾನು ರೂ.35,000/- ಎಂದು ತಪ್ಪಾಗಿ ಹೇಳಿದ್ದೇನೆ ಎಂದು ನ್ಯಾಯಾಲಯದಲ್ಲಿ ಹೇಳಿರುವುದಿಲ್ಲ.

42. ನಾನು ಯಾವುದೇ ಜಾಗದಲ್ಲಿ ಆದರೂ ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯ 8 ನೇ ಕಂಡಿಕೆಯಲ್ಲಿ ಆರೋಪಿಯು ಹಣವನ್ನು ಸ್ವೀಕರಿಸಿದ ಬಗ್ಗೆ ಪಂಚಸಾಕ್ಷಿಗಳ ಬಗ್ಗೆ ತಿಳಿಸಿದ ವಿಷಯ ಹಾಗೂ ನಂತರ ಪಂಚಸಾಕ್ಷಿಗಳು ಸದರಿ ವಿಚಾರವನ್ನು ಎಸಿಬಿ ಪೊಲೀಸರಿಗೆ ತಿಳಿಸಿದ ವಿಷಯವನ್ನು ಟ್ರಾಪ್ ಮಹಜರಿನಲ್ಲಿ ಬರೆದಿದ್ದು, ನನ್ನ ಹೇಳಿಕೆಯಲ್ಲಿಯೂ ಸಹ ಹೇಳಿರುತ್ತೇನೆ. ಹಾಗೆಯೇ ಆರೋಪಿಯನ್ನು ಪಂಚಸಾಕ್ಷಿಗಳು ತೋರಿಸಿದ್ದು ಮತ್ತು ಎಸಿಬಿ, ಪೊಲೀಸರು ಆರೋಪಿಯ ಪ್ಯಾಂಟನ್ನು ಹಣವನ್ನು ತೆಗೆದು ಅದನ್ನು ಎಣಿಸಿ ಅಮಾನತು ಪಡಿಸಿಕೊಂಡರು ಎಂಬ ವಿಚಾರವನ್ನು ಟ್ರಾಪ್ ಮಹಜರಿನಲ್ಲಿ ಬರೆದಿದ್ದು, ನನ್ನ ಹೇಳಿಕೆಯಲ್ಲಿಯೂ ಸಹ ಹೇಳಿರುತ್ತೇನೆ. ಸದರಿ ವಿಚಾರವನ್ನು ಟ್ರಾಪ್ ಮಹಜರಿನಲ್ಲಿ ಬರೆದಿಲ್ಲ ಮತ್ತು ನನ್ನ ಹೇಳಿಕೆಯಲ್ಲಿಯೂ ಹೇಳಿರುವುದಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ನ್ಯಾಯಾಲಯದ ವೇಳೆ ಮುಗಿದ ಕಾರಣ ಪಾಟೀಸವಾಲನ್ನು ಮುಂದೂಡಲಾಯಿತು.**
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.